ಪೂರ್ವದ ದಿಕ್ಕಿನಲ್ಲಿದ್ದ ಕಿಟಕಿಯಿಂದ ಹೊರಗೆ ನೋಟ ಹರಿಸಿದ ಕರಮಚಂದ. ಗೋಡೆಗೆ ಒತ್ತಿಕೊಂಡು ಬೆಳೆಸಿದ ಹೂವಿನ ಗಿಡಗಳು, ತುಸು ದೂರದಲ್ಲಿದ್ದ ಮನೆಯೆದುರಿನ ಗೇಟು ಆ ಕಿಡಕಿಯಿಂದ ಕಾಣಿಸುತ್ತಿತ್ತು. ಅಲ್ಲಿ ನಿಂತು ನಿರುಕಿಸಿದ ಕರಮಚಂದ ಹಠಾತ್ ಉದ್ಗರಿಸಿದ,

"ಬೋಪಯ್ಯ, ನಾನೊಮ್ಮೆ ಹೊರಗಡೆ ಹೋಗಿ ಬರ್ತೀನಿ."

ಚಕಚಕನೆ ಹೊರಗಡೆ ಹೋದ, ಕೆಲ ಕ್ಷಣಗಳಲ್ಲೇ ಅದೇ ಕಿಟಕಿಯ ಬಳಿ ನಿಂತು, ಒಳಗಡೆ ನೋಟ ಹರಿಸಿ, ನುಡಿದ:

"ಬೋಪಯ್ಯ, ನೀವೊಮ್ಮೆ ಆ ಪೆಟ್ಟಿಗೆಯ ಬಳಿ ಕುಳಿತು, ವಜ್ರ ನೋಡುವ ರೀತಿಯನ್ನು ತೋರಿಸಿ."

ಬೋಪಯ್ಯ ಪೆಟ್ಟಿಗೆಯ ಬಳಿ ನೆಲದ ಮೇಲೆ ಕುಳಿತು, ತಾನು ಯಾವತ್ತೂ ಮಾಡುವ ಕ್ರಿಯೆಯನ್ನು ಪ್ರದರ್ಶಿಸಿದ. ಕರಮಚಂದನಿಗೆ ಅದನ್ನು ಕಂಡು ತೃಪ್ತಿಯಾದಂತೆ ಅನಿಸಿತು. ಮತ್ತೆ ಅಲ್ಲೇ ಪರಿಶೋಧನೆ ನಡೆಸಿ, ಗೇಟಿನ ಬಳಿಗೊಮ್ಮೆ ಹೋಗಿ, ಕ್ಷಣ ಹೊತ್ತು ಮಾಯವಾಗಿ, ತುಸು ಸಮಯದ ನಂತರ ಒಳ ಪ್ರವೇಶಿಸಿದ ಕರಮಚಂದ ಮನೆಯವರನ್ನು ಪರಿಚಯಿಸಲು ಸೂಚಿಸಿದ.

ಬೋಪಯ್ಯನ ಮಲಗುವ ಕೋಣೆಗೆ ಹೊಂದಿಕೊಂಡು ಉದ್ದದ ಕಾರಿಡಾರ್. ಎಡಭಾಗಕ್ಕೆ ಚಲಿಸಿದರೆ, ಎದುರಿನ ಹಜಾರಕ್ಕೆ ಹೋಗುತ್ತದೆ. ಬಲಭಾಗದಲ್ಲಿ ಸಾಲಾಗಿ, ರೈಲು ಬಂಡಿಯ ಬೋಗಿಗಳಂತೆ, ಕೋಣೆಗಳು. ಮೊದಲನೆಯ ಕೋಣೆಗೆ ಬೀಗ ಹಾಕಿತ್ತು. ಅದು ಹಳೆಯ ಸಾಮಾನುಗಳಿರುವ ಉಗ್ರಾಣವಂತೆ. ಮುಂದಿನ ಕೊಠಡಿಯಲ್ಲಿ ಒಬ್ಬಳು ಹೆಂಗಸು ಕನ್ನಡಿಯ ಮುಂದೆ ಕುಳಿತಿದ್ದಳು.

"ಇದು ನನ್ನ ಎರಡನೆಯ ಮಗನ ಕೋಣೆ. ರಾಣಿ, ಇವ್ರು ಮನೆ ನೋಡೋಕೆ ಬಂದಿದ್ದಾರೆ. ನೀನು ಶೃಂಗಾರ ಮತ್ತೆ ಮಾಡಿಕೊಳ್ಳುವಿಯಂತೆ."

"ಮನೆ ನೋಡುವುದು? ಯಾಕೆ?"

ಬೋಪಯ್ಯನ ಮಾತಿಗೆ ಆಕೆ ಸಿಡುಕುತ್ತಾ ನಿಂತು, ಪ್ರಶ್ನಿಸಿದಳು.

"ಸಾಲ ತೀರಿಸೋದು ಯಾರು? ನಿನ್ ಗಂಡನಿಗೆ ಸ್ವಲ್ಪ ಹಣ ಕೊಡೋಕೆ ಹೇಳು." ಖಾರವಾಗಿ ಪ್ರತಿಕ್ರಿಯಿಸಿದ ಬೋಪಯ್ಯ.

"ಹಾಗಿದ್ರೆ ಮನೆ ಮಾರುತ್ತೀರಾ?"

"ನಾನ್ ಮಾರೋದು ಅಲ್ಲ. ಫೈನಾನ್ಸಿನವರು ಹಣ ವಸೂಲಿಗೆ ಮಾರೋದು. ಸಾಲಕ್ಕೆ ಮನೆ ಅಡವಿಟ್ಟಿದ್ದೇನಲ್ವಾ?"

ಅದನ್ನು ಕೇಳಿ ಆಕೆಯ ಮೊಗದಲ್ಲಿ ಗಾಬರಿ ಕಾಣಿಸಿತು.

"ಯಾವಾಗ ಮಾರೋದು?"

"ಇವ್ರಿಗೆ ಖುಷಿಯಾದ್ರೆ, ಇವತ್ತೇ ಖಾಲಿ ಮಾಡ್ಬೇಕು. ನಾವು ಇವರ ಬಾಡಿಗೆ ಮನೆಗೆ ಹೋಗ್ಬೇಕು. ಒಂದು ತಿಂಗಳ ಬಾಡಿಗೆ ಇವರೇ ಕೊಡ್ತಾರೆ."

"ಅಷ್ಟು ಬೇಗ ಖಾಲಿ ಮಾಡೋದು ಹೇಗೆ? ಅದು ಸಾಧ್ಯವೇ ಇಲ್ಲ. ನಾನಂತೂ ಇಲ್ಲಿಂದ ಕದಲೋದಿಲ್ಲ."

"ಬೋಪಯ್ಯ, ನನ್ಗೂ ಅರ್ಥ ಆಗುತ್ತೆ. ಬೇಕಾದ್ರೆ ನಿಮ್ಗೆ ಎರಡು ಕೋಣೆಗಳನ್ನ ಕೊಡ್ತೀನಿ. ನಿಮ್ಮ ಸಾಮಾನೆಲ್ಲಾ ಅಲ್ಲಿಡಿ. ವಾರದೊಳಗೆ ಅದನ್ನು ಸಾಗಿಸಬೇಕು." ಆಕೆಗೆ ನಂಬಿಕೆ ಬರಲೆಂದು ಕರಮಚಂದ ಸುಳ್ಳು ಹೇಳಿರಬೇಕು ಅಂತ ನನಗನ್ನಿಸಿತು.

"ಉಗ್ರಾಣದಲ್ಲಿ ಎಷ್ಟು ಸಾಮಾನುಗಳಿವೆ ಗೊತ್ತಾ? ಅದನ್ನು ಇಡಲಿಕ್ಕೇ ಒಂದು ಕೋಣೆ ಬೇಕಾದೀತು." ಆಕೆ ವಾದಿಸಿದಳು.